**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:4**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಪಿಡಬ್ಲ್ಯೂ:4**

**ಸಾಕ್ಷಿದಾರರ ಹೆಸರು : ರೋಹಿತ್**

**ತಂದೆ ಹೆಸರು : ಅರುಣ್**

**ವಯಸ್ಸು : 25**

**ವೃತ್ತಿ : ಚಾಲಕ**

**ವಾಸ : ಪಡುಕೋಣೆ**

**ದಿನಾಂಕ: 26-03-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ.1 ನನ್ನ ಮಾವ ಚಾಸಾ.2 ಮತ್ತು 3 ನೇಯವರು ನನ್ನ ಸಂಬಂಧಿಗಳು. ಸುನನಗೆ ಆರೋಪಿತರ ಪರಿಚಯ ಇದೆ. ನಾನು ಪರಿಶಿಷ್ಟ ಆದಿದ್ರಾವಿಡ ಜಾತಿಗೆ ಸೇರಿದವನು. ಆರೋಪಿತರಾದ ಸಂತೋಷ ಮತ್ತು ಆದಿತ್ಯ ಬಿಲ್ಲವ ಜಾತಿಯವರು ದೀಪಕ್ ಕುಲಾಲ ಜಾತಿಯವನು, ಸನತ್, ಪವನ್, ಸುದರ್ಶನ ಮತ್ತು ಚೇತನ್ ಬಂಟ್ ಜಾತಿಗೆ ಸೇರಿದವರಾಗಿರುತ್ತಾರೆ. ಆರೋಪಿತರೆಲ್ಲರೂ ಮೇಲ್ ಜಾತಿಗೆ ಸೇರಿದವರಾಗಿರುತ್ತಾರೆ. ಆರೋಪಿತರಿಗೂ ಮತ್ತು ನಮಗೂ ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಯಾವುದೇ ಮಾತುಕತೆ ಆಗಿದ್ದು ಇರುವುದಿಲ್ಲ. ಆರೋಪಿತರು ಚಾಸಾ.1 ನೇಯವರಿಗೆ ಯಾವುದೇ ಜಾತಿ ನಿಂದನೆ ಮಾಡಿ ಅವಾಚ್ಯವಾಗಿ ಬೈದಿರುವುದಿಲ್ಲ. ಆರೋಪಿತರು ಚಾಸಾ.1 ನೇಯವರ ಮೇಲೆ ಮತ್ತು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ. ಆರೋಪಿತರು ಚಾಸಾ.2, ಚಾಸಾ.3 ಮತ್ತು 5 ನೇಯವರ ಮೇಲೆ ಹಲ್ಲೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಪೋಲೀಸು ಠಾಣೆಯಲ್ಲಿ ಕೆಲವು ದಾಖಲೆಗಳಿಗೆ ನನ್ನ ಸಹಿ

ಪಡೆದಿದ್ದರು. ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ದಿನಾಂಕ:22-09-2023 ರಂದು ನಡೆದಿರುವ ಸಕ್ಷೀರು ಸ್ತಳ ಮಹಜರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-7 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರು ಸಮಯ ತಯಾರಿಸಿದ ಕರಡು ನಕಾಶೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದ್ರಿ ನಕಾಶೆಯನ್ನು ನಿಪಿ-8 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಘಟನಾ ಸಮಯ ತೆಗೆದ ಛಾಯಾಚಿತ್ರದಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ಗುರುತಿಸಿದ್ದು ಸದ್ರಿ ಒಟ್ಟು 4 ಛಾಯಾಚಿತ್ರಗಳನ್ನು ಒಟ್ಟಾಗಿ ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿರುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ**

ನಾಡಾ ಗ್ರಾಮದ ಪ್ರಸನ್ನ ಗಣಪತಿ ದೇವಸ್ಥಾನದ ವಠಾರದಲ್ಲಿ ಕೂರಿಸಿದ್ದ ಗಣಪತಿ ಮೂರ್ತಿಯನ್ನು ದಿ:20-09-2023 ರಂದು ವಿಸರ್ಜನೆ ಮಾಡುವ ಸಮಯ ಮೆರವಣಿಗೆಯಲ್ಲಿ ಡ್ಯಾನ್ಸ ಮಾಡುವಾಗ ನನ್ನ ಕಾಲು ಆರೋಪಿ ಸನತ್ ಶೆಟ್ಟಿಗೆ ತಾಗಿದ್ದು, ಇದೇ ವಿಚಾರದಲ್ಲಿ ಅವರ ಸ್ನೇಹಿತರಾದ ಆದಿತ್ಯ ಮತ್ತು ದೀಪಕ್ ನನ್ನೊಂದಿಗೆ ಜಗಳಕ್ಕೆ ಬಂದಿದ್ದು, ನಮ್ಮೊಳಗೆ ಬಾಯ್ ಮಾತಿನ ಜಗಳವಾಗಿರುತ್ತದೆ ಎಂದರೆ ಸರಿ ಅಲ್ಲಾ. ಗಣಪತಿ ವಿಸರ್ಜನೆ ಮುಗಿದ ನಂತರ ನನ್ನ ಮಾವ ಗಣಪತಿ ದೇವಸ್ಥಾನದ ಸೇವಾ ಸಮಿತಿಯವರಿಗೆ ದೂರು ನೀಡಿದ್ದು ಸೇವಾ ಸಮಿತಿಯವರು ಆ ಬಗ್ಗೆ ರಾಜೀ ಪಂಚ್ಯಾತಿ ಮಾಡಿ ಸನತ್ ಮತ್ತು ಆದಿತ್ಯ ಪೂಜಾರಿಯವರಿಂದ ನನಗೆ ಮತ್ತು ನನ್ನ ಮಾವ ಸುರೇಶ್‌ಗೆ ಕ್ಷಮೆ ಕೇಳಿಸಿರುತ್ತಾರೆ ಎಂದರೆ ಸರಿ ಅಲ್ಲಾ.

ದಿನಾಂಕ:20-09-2023 ರಂದು 10.15 ಗಂಟೆಗೆ ನನ್ನ ಮಾವ ಆರೋಪಿ ಆದಿತ್ಯ ಪೂಜಾರಿ ಫೋನ್ ಮಾಡಿದ ಮೇರೆಗೆ ಗುಡ್ಡೆಯಂಗಡಿಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಬಳಿ ಹೋಗಿದ್ದು ನಾನೂ ಕೂಡಾ ಚಂದ್ರಿಕಾ ಬಾರ್ ನಿಂದ ಸ್ವಲ್ಪ ಹಿಂದೆ ಬೈಕ್ ನಿಲ್ಲಿಸಿ ಬಾರ್ ಬಳಿ ಹೋಗಿ ನೋಡಿದಾಗ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್

ಬಳಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಸೇರಿಕೊಂಡಿದ್ದು, ಆರೋಪಿ ಆದಿತ್ಯ ಪೂಜಾರಿ ಚಾಸಾ.1 ನೇಯವರನ್ನು ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಕಡೆಯಿಂದ ರಸ್ತೆ ಕಡೆಗೆ ದೂಡಿಕೊಂಡು ಹೋಗಿ ಸಾರ್ವಜನಿಕ ಸ್ಥಳದಲ್ಲಿ ಬೋಳಿ ಮಗನೇ, ಸೂಳೇ ಮಗನೇ ನೀವು ಕೂಸಾ ಜಾತಿಯವರು, ಕಸದ ಗಾಡಿ ಓಡಿಸುವ ಕೂಸಾಳು ಕೊರಗರಲ್ಲಿ ಕ್ಷಮೆ ಕೇಳುವಂತೆ ಮಾಡಿದ್ದೀಯಾ ಎಂದು ಅವಾಚ್ಯವಾಗಿ ಬೈದು ಆರೋಪಿತರೆಲ್ಲರೂ ಕೈಯಿಂದ ಚಾಸಾ.1 ನೇಯವರ ಮೈ ಕೈಗೆ ಹೊಡೆದಿದ್ದಲ್ಲದೇ ಆರೋಪಿ ಸಂತೋಷ ಅಲ್ಲೇ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಮರದ ದೊಣ್ಣೆಯನ್ನು ತೆಗೆದುಕೊಂಡು ಬಂದು ಚಾಸಾ.1 ನೇಯವರ ತಲೆಯ ಹಿಂಬದಿಗೆ ಹೊಡೆದಿರುತ್ತಾನೆ ಎಂದರೆ ಸರಿ ಅಲ್ಲಾ. ಚಾಸಾ.1 ನೇಯವರು ಮೊಗ್ಗರಿಸಿ ಕಾಂಕ್ರೀಟ್ ರಸ್ತೆಯಲ್ಲಿ ಬಿದ್ದಾಗ ಅವರನ್ನು ತಪ್ಪಿಸಲು ಬಂದ ಚಾಸಾ.2 ಮತ್ತು 3 ನೇಯವರಿಗೂ ಕೂಡಾ ಆರೋಪಿತರು ಕೈಗಳಿಂದ ಹೊಡೆದು ಕಾಲಿನಿಂದ ಎದೆಗೆ ಮತ್ತು ಹೊಟ್ಟೆಗೆ ತುಳಿದಿರುತ್ತಾರೆ ಎಂದರೆ ಸರಿ ಅಲ್ಲಾ. ನಂತರ ತಪ್ಪಿಸಲು ಹೋದ ನನಗೆ ಆರೋಪಿತರಾದ ಆದಿತ್ಯ ದೀಪಕ್ ಮತ್ತು ಸಂತೋಷ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ ಅಲ್ಲಾ. ಚಾಸಾ.5 ನೇಯವರು ಕೂಡಾ ಚಾಸಾ.1 ನೇಯವರ ಸಪೋರ್ಟಿಗೆ ಬಂದವರೆಂದು ತಿಳಿದು ಆದಿತ್ಯ ಮತ್ತು ದೀಪಕ್ ಕೈಗಳಿಂದ ಅವರಿಗೆ ಹೊಡೆದಿರುತ್ತಾರೆ ಎಂದರೆ ಸರಿ ಅಲ್ಲಾ. ಆರೋಪಿತರ ಹಲ್ಲೆಯಿಂದ ಚಾಸಾ.1 ನೇಯವರ ಟೀ ಶರ್ಟು ಹರಿದು ಹೋಗಿತ್ತು ಎಂದರೆ ಸರಿ ಅಲ್ಲಾ. ಆರೋಪಿತರು ಮಾಡಿದ ಹಲ್ಲೆಯಿಂದ ಗಾಯಗೊಂಡ ಚಾಸಾ.1 ನೇಯವರು ಚಿಕಿತ್ಸೆಗಾಗಿ ಕುಂದಾಪುರ ಸರಕಾರಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮತ್ತು ನನ್ನ ಮಾವನ ಬಳಿ ಆರೋಪಿ ಸನತ್ ಶೆಟ್ಟಿ ಮತ್ತು ಆದಿತ್ಯ ಪೂಜಾರಿಯವರು ಕ್ಷಮೆ ಕೇಳುವಂತೆ ಮಾಡಿದ್ದಕ್ಕೆ ಕೋಪಗೊಂಡು ಚಾಸಾ.1 ನೇಯವರು ಪರಿಶಿಷ್ಟ ಜಾತಿಗೆ ಸೇರಿದವರೆಂದು ತಿಳಿದೂ ಕೂಡಾ ಸಾರ್ವಜನಿಕವಾಗಿ ಅವರಿಗೆ ಅವಮಾನ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದ್ದಲ್ಲದೇ ಬಿಡಿಸಲು ಹೋದ ಚಾಸಾ.2, ಚಾಸಾ.3 ಮತ್ತು ನನಗೂ ಹಾಗೂ ಚಾಸಾ.5 ನೇಯವರಿಗೂ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲಾ. ಆ ಬಗ್ಗೆ ನಾನು ದಿನಾಂಕಃ 22-09-2023 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

ದಿನಾಂಕಃ22-09-2023 ರಂದು ಪೋಲೀಸರು ಘಟನಾ ಸ್ತಳದ ಪಂಚನಾಮೆಗಾಗಿ ಬಂದಿದ್ದು, ಘಟನಾ ಸ್ತಳವನ್ನು ನಾನು ಪೋಲೀಸರಿಗೆ ತೋರಿಸಿಕೊಟ್ಟಿದ್ದು ಪಂಚರಾದ

ರಾಘವೇಂದ್ರ ಮತ್ತು ರವಿವರ್ಮ ಇವರ ಸಮಕ್ಷಮ ಪೋಲೀಸರು ಸ್ಥಳ ಪರಿಶೀಲನೆ ಮಾಡಿ ಪಂಚನಾಮೆ ತಯಾರಿಸಿರುತ್ತಾರೆ ಎಂದರೆ ಸರಿ ಅಲ್ಲಾ. ಪಂಚನಾಮೆ ಸಮಯ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಮರದ ದೊಣ್ಣೆಯನ್ನು ನಾನು ಹಾಜರುಪಡಿಸಿದ್ದು ಪಂಚನಾಮೆಯಡಿ ಮರದ ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಪಂಚನಾಮೆಯನ್ನು 11-15 ಗಂಟೆಯಿಂದ 12.15 ಗಂಟೆ ಅವಧಿಯಲ್ಲಿ ಮಾಡಿದ್ದು ಪಂಚನಾಮೆ ಸಮಯ ಕರಡು ನಕಾಶೆ ಹಾಗೂ ಛಾಯಾಚಿತ್ರವನ್ನು ತೆಗೆಯಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ನಿಪಿ-7 ಹಾಗೂ ಕರಡು ನಕಾಶೆ ನಿಪಿ-8 ಕ್ಕೆ ನಾನು ಘಟನಾ ಸ್ಥಳದಲ್ಲಿ ಓದಿ ನೋಡಿ ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲಾ.

ನಾನು ಮತ್ತು ನನ್ನ ಕುಟುಂಬದ ಸದಸ್ಯರು ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರ ಶ್ರೀ ಕೆ ಪಿ ಕೆ ಎಸ್ ರವರಿಂದ

ನಿಪಿ-9 ಫೋಟೋಗಳನ್ನು ಯಾಕಾಗಿ ಎಲ್ಲಿ ಯಾರು ತೆಗೆದಿದ್ದಾರೆ ಎಂದು ನನಗೆ ಹೇಳಲಿಕ್ಕೆ ಬರುವುದಿಲ್ಲ. ನಿಪಿ-7 ಮಹಜರಿಗೆ ಮತ್ತು ನಿಪಿ-8 ನಕಾಶೆಗೆ ನಾನು ಗಂಗೊಳ್ಳಿ ಪೋಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸದ್ರಿ ದಾಖಲಾತಿಗಳಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ದಾಖಲಾತಿಗೆ ಮತ್ತೆ ಬೇರೆ ಯಾರು ಸಹಿ ಮಾಡಿದ್ದಾರೆ ಅಂತ ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ನನ್ನ ಮತ್ತು ನನ್ನ ಗೆಳೆಯರ ನಡುವೆ ಯಾವುದೇ ಘಟನೆ ಆಗಿಲ್ಲ ಮತ್ತು ಆರೋಪಿತರು ಯಾವತ್ತೂ ನಮ್ಮನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ